**ದಿನಾಂಕಃ 05/06/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:** ವಾದಿ **ಪರ** ಶ್ರೀ ಎಸ್.ಎಂ.ಪಿ **ವಕೀಲರಿಂದಃ**

4. ನಿಡಿ.1-ವಂಶವೃಕ್ಷವನ್ನು ನಾನೇ ಬರೆಸಿದ್ದು. ನನಗೆ ಸಂಬಂಧಪಟ್ಟ ಅಧಿಕಾರಿಗಳಿಂದ ವಂಶವೃಕ್ಷವನ್ನು ಪಡೆಯಲು ತೊಂದರೆ ಇಲ್ಲ. ಈ ದಾವೆಯನ್ನು ಸಲ್ಲಿಸಿದ ನಂತರ ನಿಡಿ.1-ವಂಶವೃಕ್ಷವನ್ನು ತಯಾರಿಸಿದ್ದು ಎಂದರೆ ಸರಿ. ಸರ್ವೆ ನಂ.45 ಕ್ಕೆ ಸಂಬಂಧಿಸಿದಂತೆ 2006-07 ರ ಮುಂಚಿನ ಕಂದಾಯ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ಸರ್ವೆ ನಂ.64/2 ರ ಕಂದಾಯ ದಾಖಲೆಗಳು 2004-05 ರ ಮುಂಚೆ ನನ್ನ ತಂದೆ ಮತ್ತು ದೊಡ್ಡಪ್ಪನ ಹೆಸರಿನಲ್ಲಿರಬಹುದು. ಹೆಚ್.ನಿಂಗಪ್ಪನಾಯಕ ನನ್ನ ದೊಡ್ಡಪ್ಪ. ನಿಡಿ.1 ರಲ್ಲಿ ಬರೀ ನಿಂಗಪ್ಪನಾಯಕ ಎಂದು ಬರೆಸಿದ್ದೀರಿ ಎಂದರೆ ಇರಬಹುದು.

5. ಸರ್ವೆ ನಂ.45/1 ಮತ್ತು 64/1 ಹಾಲಿ ನನ್ನ ತಂದೆ, ತಾಯಿ ಮತ್ತು ದೊಡ್ಡಪ್ಪನ ಮಗನ ಹೆಸರಿನಲ್ಲಿ ದಾಖಲೆ ಇದೆ. ನಿಡಿ.4 ರಲ್ಲಿ ಬರೀ ಮಲ್ಲಪ್ಪ ನವರ ಹೆಸರು ಮಾತ್ರ ಇದೆ ಎಂದರೆ ನಾನು ಅದನ್ನು ಪರಿಶೀಲಿಸಿಲ್ಲ ಎಂದು ನುಡಿಯುತ್ತಾರೆ. 1980-81 ರ ಮುಂಚೆ ದಾವಾಸ್ವತ್ತುಗಳ ದಾಖಲೆಗಳು ಯಾರ ಹೆಸರಿನಲ್ಲಿತ್ತು ಎಂದು ತೋರಿಸುವ ದಾಖಲೆಗಳನ್ನು ಹಾಜರುಪಡಿಸಿಲ್ಲ. ಸರ್ವೆ ನಂ.45 ರ ದಾಖಲೆ ದಿಃ10/11/1994 ರ ಹಿಂದೆ ನನ್ನ ತಂದೆಯ ಹೆಸರಿನಲ್ಲಿತ್ತು. ಈಗಲೂ ನನ್ನ ತಂದೆಯ ಹೆಸರಿನಲ್ಲಿದೆ.

6. ಮಲ್ಲನಾಯಕರವರಿಗೆ ನನ್ನ ತಂದೆ ಮತ್ತು ದೊಡ್ಡಪ್ಪ ಇಬ್ಬರು ಮಕ್ಕಳು. ನನ್ನ ದೊಡ್ಡಪ್ಪ ಎಂದರೆ ಹೆಚ್.ನಿಂಗಪ್ಪನಾಯಕ. ನನ್ನ ದೊಡ್ಡಪ್ಪನನ್ನು ಲಿಂಗಪ್ಪನಾಯಕ ಎಂದು ಕರೆಯುತ್ತಿದ್ದರಾ ಎಂದರೆ ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪ ಕಾಡನಾಯಕರವರ 2 ನೇ ಮಗ ಕೆ.ಸಣ್ಣಪ್ಪನಾಯಕ ಎಂದರೆ ಸರಿಯಲ್ಲ. ಸಣಪ್ಪನಾಯಕರವರನ್ನು ಲಿಂಗಪ್ಪನಾಯಕ ಎಂದೂ ಸಹ ಕರೆಯುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಎಂ.ಮಲ್ಲಪ್ಪ. ನಿಂಗಪ್ಪನಾಯಕರವರಿಗೆ, ಹೆಚ್ ಎಂಬ ಇನಿಷಿಯಲ್ ಹೇಗೆ ಬಂತೆಂದು ನನಗೆ ಗೊತ್ತಿಲ್ಲ.

7. ದಾವಾಸ್ವತ್ತು ಮೂಲತಃ ಮಲ್ಲನಾಯಕರವರಿಗೆ ಸೇರಿದ್ದು ಎಂದರೆ ಸರಿ. ನಾವು ನಮ್ಮ ತಾತನನ್ನು ಮಲ್ಲಯ್ಯ ಎಂದು ಕರೆಯುತ್ತಿದ್ದೆವು. ಕಂದಾಯ ದಾಖಲಾತಿಗಳಲ್ಲಿ ಕೆಲವು ಕಡೆ ಮಲ್ಲಯ್ಯ ಎಂದು ಇದೆ. ಕೆಲವು ದಾಖಲಾತಿಗಳಲ್ಲಿ ಮಲ್ಲನಾಯಕ ಎಂದು ನಮೂದಿದೆ. ಯಾವ ಯಾವ ಸರ್ವೆ ನಂಬರ್‌ಗಳ ದಾಖಲಾತಿಗಳಲ್ಲಿ ನನ್ನ ತಾತನ ಹೆಸರು ಮಲ್ಲನಾಯಕ ಎಂದು ಬಂದಿದೆ ಎಂದು ನನಗೆ ಗೊತ್ತಿಲ್ಲ. ದಾವಾಸ್ವತ್ತುಗಳು ನನ್ನ ತಾತನಿಗೆ ಸೇರಿದ್ದು ಎಂದು ತೋರಿಸಲು RR5 ಮತ್ತು 6 ನ್ನು ನೀಡಿದ್ದೇನೆ. ಸದರಿ ದಾಖಲಾತಿಗಳನ್ನು ಹಾಜರುಪಡಿಸಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಅವುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

8. ನಿಲವಾಡಿ ಗ್ರಾಮದ ಸರ್ವೆ ನಂ.53 ರಲ್ಲಿ ನಮಗೆ ಸಂಬಂಧಿಸಿದ ಯಾವುದೇ ಸ್ವತ್ತು ಇಲ್ಲ. ಸರ್ವೆ ನಂ.53 ರ ಆರ್.ಟಿ.ಸಿಯನ್ನು ಯಾವ ಕಾರಣಕ್ಕೆ ನೀಡಿದ್ದೇನೆಂದು ಗೊತ್ತಿಲ್ಲ. ಸರ್ವೆ ನಂ.45 ರ ಆರ್.ಟಿ.ಸಿ, ಹೆಚ್.ನಿಂಗಪ್ಪನಾಯಕ ಮತ್ತು ಮಲ್ಲಪ್ಪನವರ ಹೆಸರಿನಲ್ಲಿ ಖಾತೆ ಇದೆ ಎಂದರೆ ನನಗೆ ಗೊತ್ತಿಲ್ಲ. 1980–81 ರಲ್ಲಿ ಸರ್ವೆ ನಂ.45 ರ ಸ್ವತ್ತು ಯಾರ್ಯಾರ ಹೆಸರಿನಲ್ಲಿ ನಮೂದಾಗಿತ್ತು ಎಂದು ಗೊತ್ತಿಲ್ಲ. ಆಗ ಒಟ್ಟು 9 ಎಕರೆ ಸ್ವತ್ತು ಇತ್ತು. ಸದರಿ ಸ್ವತ್ತಿನ ಆರ್.ಟಿ.ಸಿ ಹಾಜರುಪಡಿಸಿದ್ದೇನೋ, ಇಲ್ಲವೋ ನನಗೆ ಗೊತ್ತಿಲ್ಲ.

9. ಕಾಡನಾಯಕರವರಿಗೆ ಮಲ್ಲನಾಯಕ ಮತ್ತು ಕೆ.ಸಣ್ಣಪ್ಪನಾಯಕ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ಸರಿಯಲ್ಲ. ಕೆ.ಸಣ್ಣಪ್ಪನಾಯರವರಿಗೆ ಪುಟ್ಟಮ್ಮ ಎಂಬ ಹೆಂಡತಿ ಇದ್ದರು ಎಂದರೆ ಸರಿಯಲ್ಲ. ಅವರಿಗೆ ವಾದಿ ಮಗ ಎಂದರೆ ಸರಿಯಲ್ಲ. ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಣ್ಣಪ್ಪನಾಯಕರವರು ನಿಲವಾಡಿ ಗ್ರಾಮದಿಂದ ತೆಲಗಿನಕುಪ್ಪೆ ಗ್ರಾಮಕ್ಕೆ ಬಂದಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಸಣ್ಣಪ್ಪನಾಯಕರವರು ನಿಲವಾಡಿ ಗ್ರಾಮದಿಂದ ತೆಲಗಿನಕುಪ್ಪೆ ಗ್ರಾಮಕ್ಕೆ ಬಂದಾಗ ನಾನು ಹುಟ್ಟಿಲ್ಲದ ಕಾರಣ, ಕಾಡನಾಯಕರವರ ಮಗ ಸಣ್ಣಪ್ಪನಾಯಕ ಎಂದು ನನಗೆ ಗೊತ್ತಿಲ್ಲ ಮತ್ತು ದಾವಾಸ್ವತ್ತುಗಳಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ದಾವಾಸ್ವತ್ತುಗಳಿಗೆ ವಾದಿ ಸರಿಯಾದ ಚಕ್ಕುಬಂದಿ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತುಗಳಿಗೆ ಸುಳ್ಳು ಚಕ್ಕುಬಂದಿ ನೀಡಿದ್ದಾರೆಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಕೆ.ಸಣ್ಣಪ್ಪನಾಯಕರವರಿಗೆ ವಾದಿಯಲ್ಲದೇ 9 ಜನ ಹೆಣ್ಣು ಮಕ್ಕಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**